Doc-373
T.P-2

Reg. B G 155

16-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಬಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮುಷ್ಕರ ಹೂಡುವ ನೌಕರರ ಮೇಲೆ ಉಗ್ರ ಕ್ರಮ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

14 ದೇಶಗಳಲ್ಲಿ ಒಪ್ಪಿತ

ಬ್ಯಾಂಗ್‌ಕಾಕ್— ಭಾರತ, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಸೇರಿ 14 ಏಷ್ಯಾ ದೇಶಗಳು ಒಂದು ಹಡಗು ಕೇಂದ್ರ ಸ್ಥಾಪಿಸಲು ಒಪ್ಪಿವೆ – ಇದು ವ್ಯಾಪಾರ ಹಡಗುಗಳ ವಿಸ್ತರಣೆ ಮತ್ತು ಕಾರ್ಯ ಮತ್ತು ಸಾಗಾಣಿಕೆ ದರ ಬಗ್ಗೆ ಸಲಹೆ ನೀಡುವುದು.

ಉಪಾಧ್ಯಾಯರ ಚಳವಳಿ

ತಿರುಪತಿ— ಸರಕಾರ ಕೊಡುವ ದರದ ರೀತಿಯಲ್ಲೇ ತಮ್ಮ ಸಂಬಳವಿರಬೇಕೆಂದು ಒತ್ತಾಯ ಮಾಡುವದಕ್ಕಾಗಿ ನೇರಕಾರ್ಯಾಚರಣೆ ನಡೆಸಲು ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಸಂಘ ನಿರ್ಧರಿಸಿದೆ – ಪ್ರಪ್ರಥಮವಾಗಿ ಯಾವುದಾದರೂ ಒಂದು ದಿನ ಎಲ್ಲ ಸದಸ್ಯರೂ ಪ್ರಾಸಂಗಿಕ ರಜಕ್ಕೆ ಅರ್ಜಿ ಹಾಕುವದೆಂದು ನಿರ್ಧರಿಸಿದ್ದಾರೆ.

ಧರ್ಮ ಜಾಗೃತಿ

ಸಿರ್ಸಿ— ಸುಖ ಮತ್ತು ಪ್ರಾವಹಾರಿಕ ಜೀವನ ನಡೆಸಲು ಜನತೆಯಲ್ಲಿ ಧರ್ಮಜಾಗೃತಿ ಅತ್ಯವಶ್ಯವೆಂದು ಪ್ರಶಾಂತಿ ಮಹೋತ್ಸವವನ್ನು ಉದ್ಘಾಟಿಸುತ್ತಾ, ಜಿಲ್ಲಾಧಿಕಾರಿ ಶ್ರೀ ವೆಂಕಟೇಶ್ ಹೇಳಿದರು.

★

ನಾಸೆರೇರ ಕರೆ

ಕೈರೋ— ಜೂನ್ ಯುದ್ಧದಲ್ಲಿ ಇಸ್ರೇಲ್ ಆಕ್ರಮಿಸಿರುವ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಹೋರಾಡುವದಕ್ಕಾಗಿ ಸಿದ್ಧರಾಗಬೇಕೆಂದು ತನ್ನ ದೇಶೀಯರಿಗೆ ಅಧ್ಯಕ್ಷ ನಾಸೆರೇರವರು ಕರೆಯಿತ್ತಿದ್ದಾರೆ.

★

ಚರ್ಚಾ ಸಮ್ಮೇಳನ

ನವದೆಹಲಿ— ತಾಷ್ಕಂಟಿನಲ್ಲಿ ರಷ್ಯಾ ವಿಜ್ಞಾನಿಗಳೊಡನೆ ಚರ್ಚಾ ಸಮ್ಮೇಳನದಲ್ಲಿ ಭಾಗವಹಿಸಲು 16 ಮಂದಿ ವಿಜ್ಞಾನಿಗಳ ನಿಯೋಗವು ತಾಷ್ಕಂಟಿಗೆ ಪ್ರಯಾಣ ಮಾಡಿತು.

●

ತಾ || 19 ರ ಮುಷ್ಕರ

ನವದೆಹಲಿ— ತಾ|| 19 ರಂದು ಕೆಲಸಕ್ಕೆ ಹಾಜರಾಗಿದ ಸರ್ಕಾರಿ ನೌಕರರ ಸರ್ವಿಸ್ಸಿನಲ್ಲಿ ವಿಚ್ಛೇದವಾದಂತೆ ಭಾವಿಸಲ್ಪಟ್ಟು ಎಲ್ಲಾ ಕಾರ್ಯಗಳಿಗೂ ತಮ್ಮ ಹಿಂದಿನ ಸರ್ವಿಸ್ಸನ್ನು ಕಳೆದುಕೊಳ್ಳುವರು ಎಂದು ಒಂದು ಸರಕಾರಿ ಪ್ರೆಸ್ ಪ್ರಕಟಿಸಲಾಗಿದೆ – ಮುಷ್ಕರದ ಬೆದರಿಕೆ ಬಗ್ಗೆ ಸರ್ಕಾರವು ತೀವ್ರ ಗಮನಗೊಂಡಿದ್ದು, ವಿವಿಧ ಸಚಿವಾಲಯಗಳಿಗೆ ಮತ್ತು ಇಲಾಖೆಗಳಿಗೆ ಅಂದು ಮುಷ್ಕರಿಸುವ ಸರ್ಕಾರಿ ನೌಕರರ ಮೇಲೆ ಭದ್ರವಾದ ಕಾರ್ಯಕ್ರಮ ತೆಗೆದುಕೊಳ್ಳಲು ತಿಳಿಸಿದೆ – ಹಲವು ಸಂಘಗಳು ಮುಷ್ಕರದಲ್ಲಿ ಭಾಗವಹಿಸದಿರಲು ನಿರ್ಧರಿಸಿವೆಯೆಂದು ವರದಿಯಾಗಿದೆ – ಅಂಚೆ ತಂತಿ ಮಜದೂರು ಸಂಘವೂ, ಆಹಾರ ನೌಕರರ ಸಂಘವೂ ಮುಷ್ಕರದಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸಿವೆ – ದುರ್ಗಾ ಜಿಲ್ಲಾ ರೈಲ್ವೇಯವರು ಮುಷ್ಕರದಲ್ಲಿ ಭಾಗವಹಿಸುವುದಿಲ್ಲ – ಮುಷ್ಕರ ತಪ್ಪಿಸಲು ಪ್ರಧಾನಿಯವರ ಮತ್ತು ಕಾರ್ಯಾಚರಣ ಸಮಿತಿ ಕಾರ್ಯದರ್ಶಿಗಳಲ್ಲಿ ನಡೆದ ಮಾತುಕತೆ ವಿಫಲವಾಯಿತು.

ವಿಚಾರಣೆ ಆಜ್ಞೆ

ಕಾರವಾರ— ದಾಂಡೇಲಿಯಲ್ಲಿ ಈಚೆಗೆ ಆದ ಗಲಭೆ ಬಗ್ಗೆ ವಿಚಾರಣೆ ನಡೆಸಲು ಸಬ್ ಡಿವಿಜ್ ಆಫೀಸರಿಗೆ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ.

★

ಪಾರ್ಲಿಮೆಂಟು ಅಧಿವೇಶನಕ್ಕೆ

ಬೆಂಗಳೂರು ಪೌರ್ಲಿಮೆಂಟಿನ ಅಧಿವೇಶನಕ್ಕೆ ಒಳ್ಳೇ ಸ್ಥಳವಾಗಿದೆಯೆಂದು ಪಾರ್ಲಿಮೆಂಟಿನ ಜನಸಂಘ ಸದಸ್ಯ ಪ್ರೊ || ಮೋಡಕ್ ಹೇಳಿದರು.

ಭಾರತ ಬಂದ್

ನವದೆಹಲಿ— ತಾ|| 19 ರಂದು ಕೇಂದ್ರ ಸರ್ಕಾರಿ ನೌಕರರ ಮುಷ್ಕರ ಸಂಬಂಧದಲ್ಲಿ ನಾಯಕರು ಭಾರತ ಬಂದ್‌ಗೆ ಕರೆ ಕೊಟ್ಟಿದ್ದಾರೆ.

ಮೂಲ್ಲಾಸ್ಥಾನ

ಕಲ್ಲಿಕೋಟೆ— ಮುಸ್ಲಿಂಲೀಗಿನ ಒತ್ತಾಯಕ್ಕಾಗಿ ಕೇರಳ ಸರಕಾರ ನಿರ್ಮಿಸ ಬೇಕೆಂದಿರುವ ಹೊಸ ಜಿಲ್ಲೆ ಮೂಲ್ಲಸ್ಥಾನವನ್ನು ಜನಸಂಘವು ತಡೆದುನಿಲ್ಲಿಸಲು ಯತ್ನಿಸುವದೆಂದು ಸಂಘದ ಕಾರ್ಯದರ್ಶಿಯರು ಹೇಳಿದರು

ಕಾರ್ಪೊರೇಷನ್ನಾಗಿ ಮೈಸೂರು

ಮೈಸೂರು— ಮೈಸೂರು ನಗರ ಸಭೆಯನ್ನು ಕಾರ್ಪೊರೇಷನ್ ಆಗಿ ಮಾರ್ಪಡಿಸಲು ಹುಸೂದೆಯನ್ನು ಮುಂದಿನ ವಾರ ಶಾಸನ ಸಭೆಗಳಲ್ಲಿ ತರಲಾಗುವುದೆಂದು ನಿನ್ನೆ ಹೊಂಗನಹಳ್ಳಿಯಲ್ಲಿ ನೀರು ಶುದ್ಧಿಯ ಯಂತ್ರಾಗಾರದ ಪ್ರಾರಂಭೋತ್ಸವ ನೆರವೇರಿಸುತ್ತಾ ಪೌರಾಡಳಿತ ಮಂತ್ರಿ ಶ್ರೀ ಪುಟ್ಟಸ್ವಾಮಿ ಹೇಳಿದರು

ಸಕ್ಕರೆ ಮತ್ತು ಕಬ್ಬಿನ ಬೆಲೆ

ಹೈದರಾಬಾದು— 68-69 ರಲ್ಲಿ ಸಕ್ಕರೆ ಮತ್ತು ಕಬ್ಬಿನ ಧಾರಣೆಯನ್ನು ನಿರ್ಧರ್ಷಿಸಲು ಡೆಲ್ಲಿಯಲ್ಲಿ ತಾ || 23, 24 ರಂದು ಪ್ರಧಾನಿ ಇಂದಿರಾರವರ ಅಧ್ಯಕ್ಷತೆಯಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಏರ್ಪಡಿಸಲಾಗಿದೆ.

★

ಹಿಂದೂಗಳ ಆಚಾರ

ಸಂಗ್ರಾಹಕರು– 'ಶಾಸ್ತ್ರಧರ್ಮನಿರತ" ಆನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಪಾದ್ಮೇ ॥ ವಾಸುದೇವಾಂಗಸಂಸ್ಪೃಷ್ಟೈರ್ಹರಿಶ್ಚೂರ್ಣೈಸುವರ್ಚಸಾ ।
ಯಃಕರೋತ್ಯೂರ್ಧ್ವಪುಂಡ್ರಂಸಃವಿಷ್ಣುಲೋಕೇಮಹೀಯತೆ ॥

ಊರ್ಧ್ವಪುಂಡ್ರವನ್ನು ಧರಿಸಿದ ಮನುಷ್ಯನು, ಅಶುಚಿಯಾಗಿದ್ದರೂ, ಅನಾಚಾರವಂತನಾಗಿದ್ದರೂ, ನಿತ್ಯವೂ ಶುಚಿತ್ವವನ್ನು ಹೊಂದುತ್ತಾನೆ. ಊರ್ಧ್ವಪುಂಡ್ರವನ್ನು ಧರಿಸುವ ಮನುಷ್ಯನು ಒಂದುವೇಳೆ ಮೃತನಾದರೆ, ಅವನು ಶ್ವಪಚನಾಗಿದ್ದರೂ ವಿಮಾನದಲ್ಲಿ ನನ್ನ (ನಾರಾಯಣನ) ಲೋಕವನ್ನು ಹೊಂದುತ್ತಾನೆ.

ಶುದ್ಧವಾದ ಮೈತ್ರಿಕೆಯಿಂದ ಯಾವನ ಹಣೆಯಲ್ಲಿ ಊರ್ಧ್ವಪುಂಡ್ರವು ಶೋಭಿಸುತ್ತದೋ ಅಂಥಾ ಮನುಷ್ಯನು ಚಂಡಾಲಜಾತಿಯಲ್ಲಿ ಹುಟ್ಟಿದ್ದರೂ ಪೂಜ್ಯನು, ಅದರಲ್ಲಿ ಸಂಶಯವಿಲ್ಲ. (ಎಂದು ಸತ್ಯವ್ರತಮಹೇಳಿರುತ್ತಾನೆ)

ವಿಷ್ಣು ಬಿಂಬಕ್ಕೆ ಅಭಿಷೇಕ ಮಾಡಲ್ಪಟ್ಟ ಹರಿದ್ರಾ ಚೂರ್ಣವನ್ನು ಯಾರು ನಿತ್ಯವೂ ಊರ್ಧ್ವಪುಂಡ್ರವಾಗಿ ಧರಿಸುತ್ತಾನೋ ಅವನಿಗೆ ಅಶ್ವಮೇಧಯಾಗ ಫಲ ಲಭಿಸುತ್ತದೆ.

ಎಲೈ ಚತುರ್ಮುಖನೇ ! ವಾಸುದೇವನ ಬಿಂಬಕ್ಕೆ ಸ್ಪರ್ಶವಾಗಿರುವ ಹರಿದ್ರಾ ಚೂರ್ಣವನ್ನು ಯಾರು ಊರ್ಧ್ವಪುಂಡ್ರ ಧರಿಸಲು ಉಪಯೋಗಿಸುತ್ತಾರೆಯೋ ಅವನು ವಿಷ್ಣುಲೋಕದಲ್ಲಿ ವಾಸಮಾಡುತ್ತಾನೆ.

ಪುಡ್‌ಲಾಂಡ್ 12-9-68 ರಿಂದ
ವೈಭವ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಂಚುಗಳ್ಳಿ ರೂಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಅಜಿತ್, ಪಹಾರಿ, ಡೇವಿಡ್, ಶಶಿಕಲಾ, ಮಹಮೂದ್

ಅಪ್ಪೇರ— ಜನಪ್ರಿಯ 3 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana
ಗೋವಧೆ ಕೂಡಲೆ ನಿಶೇಧವಾಗಲಿ

Protect the Cow
ಗೋರಕ್ಷಣೆ ವಂಶ, ಪ್ರಾಣದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

Cow Slaughter should be banned Immediately

SHAKTI
SUDHA
A Superb Tonic

Printing — Neat Binding
Lakshminarasimha Press
Sivarampet, Mysore

ಅಶೋಕ ಏಜೆನ್ಸೀಸ್
ಲೀನ್ಸ್‌ಡ್ಡ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುವ ಕೇಂದ್ರ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4